**DECEMBER 2023** **U/ID 30704/ULC2A**

Time : Three hours Maximum : 75 marks

PART A — (10 × 2 = 20 marks)

ಕೆಳಗಿನವುಗಳಲ್ಲಿ ಯಾವುದಾದರೂ ಹತ್ತಕ್ಕೆ ಸಂಕ್ಷಿಪ್ತವಾಗಿ ಉತ್ತರಿಸಿ.

ಉತ್ತರದ ಮಿತಿ 30 ಪದಗಳು.

1. ಹೂ–ಎಲೆಗಳ ಮೇಲೆ ಬಿದ್ದ ಮಂಜಿನ ಹನಿಯನ್ನು ಕವಿ ಹೇಗೆ ವರ್ಣಿಸಿದ್ದಾರೆ?

2. ಬಲಾಕ ಪಕ್ಷಿಗಳು ಹಾರುತ್ತಾ ಬಂದುದನ್ನು ನೋಡಿದಾಗ ಕವಿಗೆ ಏನೆನ್ನಿಸಿತು?

3. 'ಶಾರದೆ' ಎಂದು ಕವಿಯು ಯಾರನ್ನು ಕರೆದಿದ್ದಾರೆ ಮತ್ತು ಏಕೆ?

4. 'ಮನೆ ತುಂಬಿಸುವುದು' ಕವನದಲ್ಲಿ ತಂದೆಯು ಮಗಳನ್ನು ಹೇಗೆ ವರ್ಣಿಸುತ್ತಾನೆ.

5. 'ಮಲ್ಲಿ' ಯ ರೂಪವನ್ನು ಕವಿ ಹೇಗೆ ವರ್ಣಿಸಿದ್ದಾರೆ?

6. ಕನ್ನಡ ನಾಡಿನ ರಥವನ್ನು ಹೇಗೆ ಎಳೆಯಬೇಕೆಂದು ಕವಿಯು ಕನ್ನಡ ಜನತೆಗೆ ಕರೆ ನೀಡಿದ್ದಾರೆ?

7. 'ದೇವರು–ಪೂಜಾರಿ' ಕವನದಲ್ಲಿ ವರ್ಣಿಸಿರುವ ಗಂಟಾ ನಾದ.

8. 'ಸಮಾಧಾನ' ಕವನದಲ್ಲಿ ಕುಡುಕ ಸೂರ್ಯಾಸ್ತವನ್ನು ಕಂಡು ಏನೆಂದುಕೊಳ್ಳುತ್ತಾನೆ?

9. ನಿರೂಪಕ ತಾನು ಮೆಚ್ಚಿದ ಕನ್ಯೆಯನ್ನು ಆಯ್ಕೆ ಮಾಡಿ, ಮದುವೆ ಮಾಡಿಕೊಂಡಿದ್ದು ಹೇಗೆ?

10. 'ಮಬ್ಬಿನಿಂದ ಮಬ್ಬಿಗೆ' ಕವನದಲ್ಲಿನ ಯೌವನದ ವರ್ಣನೆ.

11. 'ನಾಗಿ' ಏನನ್ನು ನೆನೆದು ಕಣ್ಣೀರು ಹಾಕಿದಳು?

12. 'ಅಂಗುಲ ಹುಳು' ಏನೇನನ್ನೆಲ್ಲ ಅಳೆಯಿತು?

PART B — (5 × 5 = 25 marks)

ಕೆಳಗಿನ ಪ್ರಶ್ನೆಗಳಲ್ಲಿ ಯಾವುದಾದರೂ ಐದಕ್ಕೆ ಉತ್ತರಿಸಿ.

ಉತ್ತರದ ಮಿತಿ 200 ಪದಗಳು.

13. ರಸವಶನಾಗುತ ಕವಿ ನೋಡಿದ ದೃಶ್ಯ ಯಾವುದು?

14. 'ಈಗಿವಳು ಶಾರದೆ' - ಸದಾ ಶಾಂತೆ, ಶುಚಿಸ್ಮಿತೆ, ಗಂಭೀರೆ, ತೇಜೋನ್ವಿತೆ – ಸಂದರ್ಭದೊಂದಿಗೆ ವಿವರಿಸಿ.

15. 'ಎರಡೂ ಮನೆಗಳ ಹೆಸರು ಖ್ಯಾತಿಗಳು ಉಳಿಯುವ ಹಾಗೆ ತುಂಬಿದಾಯುಷ್ಯದಲಿ ಬದುಕು' - ಸಂದರ್ಭದೊಂದಿಗೆ ವಿವರಿಸಿ.

16. 'ಮದರಾಸಿನಲಿ ಬಿರುಗಾಳಿ ಎದ್ದು, ಮೈಸೂರಿನಲ್ಲಿ ಹತ್ತು ಹನಿ ಮಳೆ ಬಿದ್ದಿತೆನ್ನಿ, ಇವಳಿಗೆ ನೆಗಡಿ' - ಸಂದರ್ಭದೊಂದಿಗೆ ವಿವರಿಸಿ.

17. 'ಸಣ್ಣ ಕಂದಮ್ಮಗಳ ಕಣ್ಣೀನ ಕವಡೀಯ ತಣ್ಣನ್ನ ಜೋಮಾಲೆ ಕೊರಳೊಳಗಿತ್ತೊ' - ಸಂದರ್ಭದೊಂದಿಗೆ ವಿವರಿಸಿ.

18. 'ಅಗೆದ ಬಾವಿಗೆ ದಿಕ್ಕು ದಿಕ್ಕಿನಿಂದಲು ನೆಗೆದು, ಚಿಮ್ಮಿ ಬಹ ಚಿಲುಮೆಗಳ ಚಳುಕಿನಿಂದ' - ಸಂದರ್ಭದೊಂದಿಗೆ ವಿವರಿಸಿ.

19. 'ಮನೆಯಿಂದ ಮನೆಗೆ' - ಕವನದಲ್ಲಿ ಮನೆ ಬದಲಾಯಿಸುವ ಸನ್ನಿವೇಶ.

PART C — (3 × 10 = 30 marks)

ಕೆಳಗಿನವುಗಳಲ್ಲಿ ಯಾವುದಾದರೂ ಮೂರು ಪ್ರಶ್ನೆಗಳಿಗೆ ಉತ್ತರಿಸಿ. ಉತ್ತರದ ಮಿತಿ 500 ಪದಗಳು.

24ನೇ ಪ್ರಶ್ನೆ ಕಡ್ಡಾಯ.

20. 'ಮನೆಯಿಂದ ಮನೆಗೆ' ಕವನದ ಸ್ವಾರಸ್ಯವನ್ನು ತಿಳಿಸಿ.

21. ವಿದ್ಯಾವಂತರಾದರೂ, ಹಳೆಯ ಸಂಪ್ರದಾಯಗಳ ಬೇಲಿಯೊಳಗೇ ಬಂಧಿತರಾಗುವ ಬಗೆಯನ್ನು 'ಅಮ್ಮ, ಆಚಾರ, ನಾನು'- ಕವನವು ಹೇಗೆ ನಿರೂಪಿಸಿದೆ.

22. 'ಕುರುಡು ಕಾಂಚಾಣ' ಕವನದ ಸ್ವಾರಸ್ಯವನ್ನು ವಿವರಿಸಿ.

23. ಅಂಗುಲ ಹುಳು ಹೇಗೆ ತಪ್ಪಿಸಿಕೊಂಡಿತು? ವಿವರಿಸಿ.

24. ಕೆಳಗಿನವುಗಳಲ್ಲಿ ಯಾವುದಾದರೂ ಒಂದಕ್ಕೆ ಪ್ರಬಂಧ ಬರೆಯಿರಿ.

(a) ಕೋವಿಡ್ – 19

(b) ನಿಮ್ಮ ಮೆಚ್ಚಿನ ಪುಸ್ತಕ

(c) ಕನ್ನಡ ಭಾಷೆಯ ಪ್ರಾಚೀನತೆ.